ಡ್ರಾಯಿಂಗ್ ರೂಮಿನಲ್ಲಿದ್ದ ಕುರ್ಚಿಗಳನ್ನು ಎಳೆದು ಕುಳಿತುಕೊಂಡರು. ಒಬ್ಬನು ಬಾಗಿಲ ಹೊರಗೆ ನಿಂತುಕೊಂಡ.

ರಾಯರು ತಡವರಿಸುತ್ತಾ 'ನಿಮಗೆ ಏನಾಗಬೇಕಿತ್ತು ನನ್ನಿಂದ?' ಎಂದು ಕ್ಷೀಣಸ್ವರದಲ್ಲಿ ಪ್ರಶ್ನಿಸಿದರು. ಅವರಲ್ಲೊಬ್ಬ ನಿರ್ಲಿಪ್ತನಂತೆ, 'ಮೊದಲು ನೀವು ನಿಮ್ಮ ಕುರ್ಚಿಯಲ್ಲಿ ಕುಳಿತುಕೊಳ್ಳಿ. ಆಮೇಲೆ ಸಾವರಿಸಿಕೊಳ್ಳಿ. ನಾವು ನಿಮಗೇನೂ ಅಪಾಯವೊಡ್ಡುವುದಿಲ್ಲ' ಎಂದ.

ರಾಯರ ಆತಂಕ ಸ್ವಲ್ಪ ಕಡಿಮೆಯಾಯಿತು. ಅವರು ತಾನು ನಿತ್ಯ ಕೂರುವ ಕುರ್ಚಿಯಲ್ಲಿ ಕುಳಿತುಕೊಂಡು 'ಹೇಳಿ?' ಎನ್ನಲು ಗಂಟಲು ಸರಿ ಮಾಡಿಕೊಂಡರು. ಸರೋಜಮ್ಮ ರಾಯರ ಕುರ್ಚಿಗೆ ಒರಗಿ ನಿಂತು 'ದಾಲ ಮಣ್ಪೊಡ್ಚಿ ಅಣ್ಣ ಗುರ್ಕಾರೆಗ್' (ಏನೂ ಮಾಡಬೇಡಿ ನನ್ನ ಯಜಮಾನರಿಗೆ) ಎಂದು ಆಗುಂತಕರಿಗೆ ಕೈಮುಗಿದರು. ಆಗುಂತಕರು ಸ್ವಲ್ಪ ಹೊತ್ತು ಏನೂ ಆಡದೆ ರಾಯರನ್ನೇ ದಿಟ್ಟಿಸಿ ನೋಡಿದರು. ರಾಯರೂ ತನ್ನ ಇದಿರು ಕುಳಿತ ನಾಲ್ವರನ್ನೂ ಬಿಡುಗಣ್ಣಿನಿಂದ ನೋಡತೊಡಗಿದರು. ಅವರೆಲ್ಲರೂ ಇಪ್ಪತ್ತು ಇಪ್ಪತ್ತೆರಡರ ವಯಸ್ಸಿನವರಾಗಿದ್ದರು. ಪಡ್ಡೆ ಹುಡುಗರ ವೇಷಭೂಷಣದಲ್ಲಿದ್ದರೂ ಅವರ ಕಣ್ಣುಗಳಲ್ಲಿ ಕ್ರೌರ್ಯ ಇಲ್ಲ ಎಂದು ಅವರಿಗೆ ಅನಿಸತೊಡಗಿತು. ಅವರು ನಿಧಾನವಾಗಿ 'ನಿಮಗೆ ಏನಾಗಬೇಕಿತ್ತು ನನ್ನಿಂದ?' ಎಂಬ ಮಾತನ್ನು ಮುಂದಿಟ್ಟರು.

ಅವರಲ್ಲೊಬ್ಬ ಸಣಕಲು ವ್ಯಕ್ತಿ ಜೊತೆಗಿದ್ದ ದಾಂಡಿಗನಲ್ಲಿ ತುಳುವಿನಲ್ಲಿ 'ಈರ್ ಪಣ್ಲೆ' (ನೀವು ಹೇಳಿ) ಎಂದ. ಆತ 'ಬೊಡ್ಚಿ ಮಾರಾಯ. ಈಯೇ ಪಣ್' (ಬೇಡ ಮಾರಾಯ, ನೀನೇ ಹೇಳು) ಎಂದ. ರಾಯರಿಗೆ ಮೊದಲು ಮಾತನಾಡಿದ ಸಣಕಲು ವ್ಯಕ್ತಿಯೇ ಈ ಗ್ಯಾಂಗಿನ ನಾಯಕ ಅನಿಸಿತು. ಅವರು ಅವನ ಕಡೆ ದೃಷ್ಟಿನೆಟ್ಟು 'ಏರ್ಲಾ ಆವಣ್ಣಾ, ದಾದ ಆವೊಡು ಪಣ್ಲೆ' (ಯಾರೂ ಆದೀತು, ಏನಾಗಬೇಕು ಹೇಳಿ?) ಎಂದರು.

ಆ ಸಣಕಲು ವ್ಯಕ್ತಿ ತುಳುವಿನಲ್ಲಿ ಮಾತನಾಡಲು ಪ್ರಾರಂಭಿಸಿ, ಕನ್ನಡದಲ್ಲಿ ಮುಂದುವರಿಸಿದ. 'ನಾವು ಉದ್ದುದ್ದ ಮಾತನಾಡಲು ಬಂದವರಲ್ಲ. ಒಂದು ಮುಖ್ಯ ವಿಷಯ ನಿಮಗೆ ತಿಳಿಸಿ, ಎಚ್ಚರಿಕೆ ಕೊಡಲು ಬಂದಿದ್ದೇವೆ. ವಿಷಯ ಏನು ಅಂದರೆ, ನೀವು ಸೀತಾಪುರಕ್ಕೆ ಬರುವ ಮೊದಲು ನಮ್ಮ ಈ ಊರು ತುಂಬಾ ನೆಮ್ಮದಿಯಲ್ಲಿ ಇತ್ತು. ನೀವು ಬಂದ ಮೇಲೆ, ನೀವು ದೊಡ್ಡ ಪ್ರೊಫೆಸರ್ ಮತ್ತು ಸಾಹಿತಿ ಎಂದು ನಮ್ಮ ಊರಿನಲ್ಲಿ ಕೆಲವರು ನಿಮ್ಮನ್ನು ಕರೆದು ಗೌರವಿಸಹತ್ತಿದರು. ಆಮೇಲೆ ನಮ್ಮ ಊರಲ್ಲೂ ಅಲ್ಲದೇ, ನಮ್ಮ ಗ್ರಾಮದ ಆಚೀಚೆ, ಯಾಕೆ ಕಾರ್ಕಳ ಮೂಡಬಿದ್ರೆಯಲ್ಲೂ ಭಾಗವಹಿಸುವಂತೆ ನಿಮಗೆ ಕರೆಗಳು ಬರತೊಡಗಿತು. ಇದರಿಂದ ನಮಗೇನೂ ತೊಂದರೆ ಆಗಲಿಲ್ಲ. ಆದರೆ ನೀವು ಅನೇಕ ಕಡೆ 'ದೇವರು ಇಲ್ಲ, ದೇವರನ್ನು ಸೃಷ್ಟಿಸಿದ್ದು ನಾವೇ' ಎಂದು ಹೇಳುತ್ತಾ ದೇವರನ್ನು ನಂಬುವವರ ಮನಸ್ಸನ್ನು ನೋಯಿಸಲು ಹತ್ತಿದಿರಿ. ಆದರೆ ನಾವು ತುಳುವರಿಗೆ ನಾಗಬ್ರಹ್ಮ ಅಂದರೆ ಎಲ್ಲಿಲ್ಲದ ಗೌರವ. ಅಂಥ ನಾಗನನ್ನೂ ನೀವು ಲೇವಡಿ ಮಾಡಿದ್ದಲ್ಲದೆ, ಈಚೆಗೆ ಒಂದು ಭಾಷಣದಲ್ಲಿ ಸಾಹಿತಿಯೊಬ್ಬರು ಭೂತದ ಕಲ್ಲಿಗೆ ತಾನು ಬಾಲ್ಯದಲ್ಲಿ ಮೂತ್ರ ಮಾಡಿದ್ದೆ ಎಂಬುದನ್ನು ಉಲ್ಲೇಖಿಸಿ ಅದರಿಂದ ಅವರಿಗೇನೂ ಆಗಿಲ್ಲ ಎಂದೂ ಹೇಳಿದ್ದೀರಿ. ಹೀಗೆ ನೀವು ನಮ್ಮ ದೈವಗಳನ್ನು ಕೀಳಂದಾಜಿಸುತ್ತಾ ಬರುತ್ತಿದ್ದೀರಿ. ನಿಮ್ಮ ಜೀವನದೃಷ್ಟಿ ಬೇರೆ ಇರಬಹುದು. ಅದು ಸರಿಯೂ ಇರಬಹುದು. ಆದರೆ ನಮ್ಮ ನಂಬಿಕೆಗಳ ಮೇಲೆ ನಮ್ಮ ಬದುಕು ನಿಂತಿದೆ. ಅದರ ಬುಡವನ್ನೇ ಅಲುಗಾಡಿಸಿ ನಿಮಗೆ ಆಗುವ ಲಾಭ ಏನು? ಇಷ್ಟಕ್ಕೂ ಈ ಊರಿನಲ್ಲಿ ನೆಲೆಸಿರುವ ಶಾಂತಿಯನ್ನು ಕೆಡಿಸಲಿಕ್ಕೆ ಬಂದವರ ಹಾಗೆ ನೀವು ಈಗ ಕಾಣಿಸಿಕೊಂಡಿದ್ದೀರಿ. ಇದನ್ನು ನಾವು ಸಹಿಸುವುದು ಖಂಡಿತ ಸಾಧ್ಯವಿಲ್ಲ. ನೀವು ದೊಡ್ಡ ಸಾಹಿತಿ ಮತ್ತು ಪ್ರೊಫೆಸರೂ ಆಗಿರಬಹುದು. ಆದರೆ ಅದೆಲ್ಲ ಇಲ್ಲಿ ಬೇಡ ಎಂದು ಎಚ್ಚರಿಸಲು ಬಂದಿದ್ದೇವೆ' ಎಂದ. ಆಮೇಲೆ ಆತ ಪಕ್ಕದಲ್ಲಿದ್ದವನನ್ನು ತಿವಿದು 'ಹೇಳಿದ್ದು ಸರಿಯಾಯಿತಲ್ಲ?' ಎಂದು ಪ್ರಶ್ನಿಸಿದ.

ರಾಯರು ತುಟಿ ಬಿಚ್ಚಲಿಲ್ಲ. ಏನೂ ಆಡದೆ ಮುಖವನ್ನೊಮ್ಮೆ ತುರಿಸಿಕೊಂಡರು. ಇವರಿಗೆ ಮನದಟ್ಟಾಗುವ ಹಾಗೆ ತನ್ನ ನಿಲುವನ್ನು ಹೇಗೆ ವ್ಯಕ್ತಪಡಿಸುವುದು ಎಂದು ಯೋಚಿಸಹತ್ತಿದರು. ಅದನ್ನು ತಪ್ಪಾಗಿ ತಿಳಿದ ಮತ್ತೊಬ್ಬ ದಾಂಢಿಗ, 'ನೀವು ಸುಮ್ಮನಿದ್ದರೆ ಆಗುವುದಿಲ್ಲ ಮಾಸ್ಟ್ರೆ' ಎಂದ.

'ಮೊನ್ನೆ ನೀವು ನಮ್ಮ ಹೈಸ್ಕೂಲಿನ ವಾರ್ಷಿಕೋತ್ಸವದಲ್ಲಿ ಭಾಷಣ ಮಾಡುತ್ತಾ ದೇವರು ಇರುವುದು ನಮ್ಮ ಬಯಕೆಗಳನ್ನು ಈಡೇರಿಸುವುದಕ್ಕಲ್ಲ; ಅವನನ್ನು ನಾವು ಸುಮ್ಮನೇ ಪ್ರೀತಿಸಲಿಕ್ಕೆ ಎಂದಿದ್ದೀರಿ. ಅದರ ಅರ್ಥ ಏನು? ನಾವೆಲ್ಲ ಮೂರ್ಖರೆಂದೇ? ಹೆಡ್ಡರೆಂದೇ? ತಲೆತಲಾಂತರದಿಂದ ಬಂದ ನಮ್ಮ ನಂಬಿಕೆ ನಿಮ್ಮ ಒಂದು ಭಾಷಣದಿಂದ ಬದಲಾಗುತ್ತದೆ ಎಂದು ನೀವು ಅಂದುಕೊಂಡಿದ್ದರೆ ಅದು ಮೂರ್ಖತನ. ಇಷ್ಟಕ್ಕೂ ಶಾಲಾ ವಾರ್ಷಿಕೋತ್ಸವದ ಭಾಷಣದಲ್ಲಿ ದೇವರನ್ನು ನೀವು ಯಾಕೆ ಎಳೆದು ತರಬೇಕಿತ್ತು? ಇಷ್ಟೇ ಅಲ್ಲ. ಒಂದು ಕೋಟಿಗೂ ಮಿಕ್ಕಿದ ವೆಚ್ಚದಲ್ಲಿ ನಮ್ಮ ಊರಿನ ಪ್ರತಿಷ್ಠಿತ ವ್ಯಕ್ತಿಯೊಬ್ಬರು ಮಾಡಿಸಿದ ನಾಗಮಂಡಲಕ್ಕೆ ನಿಮ್ಮನ್ನು ಕರೆಸಿದರೆ, ನೀವು ನಾಗಮಂಡಲವು ಜಾನಪದದ ಒಂದು ಅದ್ಭುತ ಆಚರಣೆ ಎಂದು ಹೇಳಬಹುದು ಎಂದು ನಾವು ಅಂದುಕೊಂಡರೆ, ಅದೇನನ್ನೂ ಹೇಳದ ನೀವು ಆಫ್ರಿಕಾದ್ದೋ ಅಮೆರಿಕದ್ದೋ ಉದಾಹರಣೆಗಳನ್ನು ಕೊಟ್ಟು ನಾಗಮಂಡಲ ಮಾಡಿಸಿದವರನ್ನೂ ಅಲ್ಲಿ ಸೇರಿದವರನ್ನೂ ಅವಮಾನಿಸಿದಿರಿ. ಇದೆಲ್ಲ ಏನು ಹೇಳುತ್ತದೆ ಅಂದರೆ, ನಿಮಗೆ ನಮ್ಮ ಧರ್ಮದಲ್ಲಿ ಅಥವಾ ನಮ್ಮ ಆಚರಣೆಯಲ್ಲಿ ನಂಬಿಕೆ ಮತ್ತು ಗೌರವ ಇಲ್ಲ. ಇದರಿಂದಾಗಿ ಇಂಥ ಮನೋಭಾವದ ನಿಮ್ಮನ್ನು ಈ ಊರಿನಿಂದ ಓಡಿಸಬೇಕೆಂಬ ಒಂದು ತುರ್ತು ನಮ್ಮಂಥ ಯುವಕರಲ್ಲಿ ಕಾಣಿಸಿಕೊಂಡಿದೆ. ಅದನ್ನು ಹೇಳಲೆಂದೇ ನಾವು ಬಂದವರು!' ಎಂದ.

ರಾಯರು ಎಲ್ಲವನ್ನು ತಾಳ್ಮೆಯಿಂದ ಕೇಳಿಸಿಕೊಂಡರು. ನಿಧಾನವಾಗಿ ಮಾತಿಗೆ ಪ್ರಾರಂಭಿಸಿದರು. 'ನೋಡಿ ಗೆಳೆಯರೇ, ನಾನು ಈ ಹಳ್ಳಿಯ ನೆಮ್ಮದಿ ಕೆಡಿಸಲಿಕ್ಕಾಗಿ ಅಥವಾ ನಿಮ್ಮ ಶ್ರದ್ಧೆ ನಂಬಿಕೆಗಳನ್ನು ಅಲುಗಾಡಿಸಲಿಕ್ಕಾಗಿ ಬಂದವನಲ್ಲ. ನಾನು ಈ ಊರಿಗೆ ಬಂದದ್ದು ನನ್ನ ಹೆಂಡತಿಯ ಆರೋಗ್ಯಕ್ಕೆ ಒಂದು ಒಳ್ಳೆ ವಾತಾವರಣ ಬೇಕು ಎಂಬ ನೆಲೆಯಲ್ಲಿ. ನಿಮ್ಮ ಊರಿನವರೇ ಆದ ಸದಾಶಿವ ಶೆಟ್ಟರ ಸಹೋದರರು ನಾನು ಪ್ರಾಧ್ಯಾಪಕನಾಗಿದ್ದ ರಾಂಪುರದಲ್ಲಿ ಒಂದು ಹೆಸರಾಂತ ಹೊಟೇಲ್ ಮಾಲಕರಾಗಿದ್ದರು. ನನಗೆ ಅವರ ಪರಿಚಯವಾಗಿ ಅದು ಸ್ನೇಹಕ್ಕೆ ತಿರುಗಿದಾಗ, ನಾವು ಆತ್ಮೀಯರಾದೆವು. ಅಂಥ ಹೊಟೇಲಿನ ಸಾಹುಕಾರರಲ್ಲಿ ಒಬ್ಬರಾದ ಸದಾಶಿವ ಶೆಟ್ಟರು ರಾಂಪುರದಿಂದ ತನ್ನ ಹುಟ್ಟೂರಾದ ಸೀತಾಪುರಕ್ಕೆ ಬಂದು ನೆಲೆಸುತ್ತೇನೆ ಎಂದು ಹೊರಟಾಗ, 'ನಮ್ಮ ಹಳ್ಳಿಯ ಹವೆ ನಿಮ್ಮ ಪತ್ನಿಗೆ ಹಿಡಿಸಬಹುದು. ನೀವು ಬರುವುದಾದರೆ ಎಲ್ಲಾ ವ್ಯವಸ್ಥೆ ಮಾಡಿಕೊಡುತ್ತೇನೆ' ಎಂದು ಹೇಳಿದ್ದರು. ಆ ನೆಲೆಯಲ್ಲಿ ನಾವು ಈ ಹಳ್ಳಿಗೆ ಬಂದವರು. ಇಷ್ಟಕ್ಕೂ ನನ್ನ ಹೆಂಡತಿಗೆ ಅಲರ್ಜಿ ಕಾಯಿಲೆ ಇದ್ದು, ಅದಕ್ಕೆ ಇರುವ ಪರಿಹಾರ ಅಂದರೆ ಹವಾ ಬದಲಾವಣೆ ಎಂದು ತಜ್ಞ ವೈದ್ಯರ ಅಭಿಪ್ರಾಯ. ಹವಾ ಬದಲಾವಣೆ ಅಂದರೆ ವಾಸಸ್ಥಳ ಬದಲಾವಣೆ ತಾನೇ? ಎಂದುಕೊಂಡ ನಾನು, ರಾಂಪುರದಲ್ಲೇ ಪ್ರೊಫೆಸರಾಗಿದ್ದುದರಿಂದ ಹಲವು ವರುಷಗಳ ಕಾಲ ಸ್ಥಳ ಬದಲಾವಣೆ ಮಾಡಲು ಆಗಲಿಲ್ಲ. ಆದರೆ ನಾನು ನಿವೃತ್ತನಾಗುವ ಹೊತ್ತಿಗೆ ಸದಾಶಿವ ಶೆಟ್ಟರೂ ಸೀತಾಪುರಕ್ಕೆ ಹೊರಟ್ಟದ್ದರಿಂದ ನಾನೂ ಈ ಊರಿಗೆ ಬರುವುದು ಸಾಧ್ಯವಾಯಿತು' ಎಂದು ಮಾತು ನಿಲ್ಲಿಸಿ ತನ್ನ ಇದಿರು ಕುಳಿತವರ ಮುಖದ ಹಾವಭಾವಗಳನ್ನು ಗಮನಿಸಿದರು.

ಎದುರಿಗೆ ಕುಳಿತವರು ಸುಮ್ಮನಿರುವುದನ್ನು ನೋಡಿದ ರಾಯರು ಮತ್ತೆ, 'ನಿಮಗೆ ನನ್ನ ವೈಚಾರಿಕತೆಯ ಬಗ್ಗೆ ಅಭಿಪ್ರಾಯಭೇದ ಇರುವುದು ತಪ್ಪಲ್ಲ. ನೀವು ಕಡಿಮೆ ಓದಿದವರೇ ಇದ್ದೀರಿ. ಯಾಕೆಂದರೆ ಧರ್ಮವನ್ನು ಇಲ್ಲವೇ ನಮ್ಮ ನಂಬಿಕೆಗಳನ್ನು ಅಥವಾ ಆಚರಣೆಗಳನ್ನು ಸರಿಯಾಗಿ ವಿಶ್ಲೇಷಿಸದಿದ್ದರೆ, ಅದರ ಅರ್ಥ ಸ್ಪಷ್ಟವಾಗುವುದಿಲ್ಲ. ಅವರು ಹಾಗೆ ಹೇಳಿದ್ದಾರೆ, ಇವರು ಹೀಗೆ ಹೇಳಿದ್ದಾರೆ ಎಂದು ನಾನು ಸುಲಭವಾಗಿ ದೇವರನ್ನು ನಂಬುವವನಲ್ಲ. ಹಾಗೆಂದು ನಾನು ನಾಸ್ತಿಕನಲ್ಲ. ಆದರೆ ದೈವದೇವರಿಂದ ಯಾರು ಏನನ್ನು ನಿರೀಕ್ಷಿಸುತ್ತಾರೋ ಅಂಥವರಿಗೆ ಅವರು ನಿರೀಕ್ಷಿಸಿದ್ದು ಸಿಗದಿದ್ದಾಗ ಅವರು ನಿರಾಶರಾಗುವುದು ಸಹಜ. ಯಾಕೆಂದರೆ ಸತ್ಯ ಎನ್ನುವುದನ್ನು ನಂಬಿಕೆಯಿಂದ ನೋಡಲಾಗುವುದಿಲ್ಲ. ಅದನ್ನು ವೈಚಾರಿಕವಾಗಿಯೇ ನೋಡಬೇಕಾಗುತ್ತದೆ. ನನ್ನ ಓದು ಇದನ್ನು ನನಗೆ ಕಲಿಸಿಕೊಟ್ಟಿದೆ. ಹಾಗಾಗಿ ನೀವು ನಂಬುವ ಯಾವುದೇ ದೇವರಾಗಲೀ ದೈವವಾಗಲೀ ಅಥವಾ ನಾಗನಾಗಲೀ ಹೇಗೆ ನಿಮಗೆ ಒಳಿತನ್ನು ಮಾಡಲಾರದೋ ಹಾಗೇ ನಿಮಗೆ ಅದು ಕೆಡುಕನ್ನೂ ಮಾಡಲಾರದು ಎನ್ನುವುದು ನನ್ನ ವಾದ. ಇದನ್ನು ನಾನು ವಾಕ್‌ಸ್ವಾತಂತ್ರ್ಯ ಉಂಟು